ದಿನಾಂಕಃ 09.10.2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಐ.ಎಸ್.ಟಿ., ವಕೀಲರಿಂದಃ ಆರೋಪಿತರ ಪರವಾಗಿಃ

1. ನಾನು ಹತ್ತನೇ ತರಗತಿವರೆಗೆ ಓದಿದ್ದೇನೆ. ನನ್ನ ವಿರುದ್ಧ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಆರೋಪಿತರು ಚಿಕ್ಕಮಗಳೂರಿನ ವಿಜಯಪುರ ನಿವಾಸಿಗಳೆಂದು ಗೊತ್ತು. ವಿಜಯಪುರ ಒಂದು ಜನ ನಿಬಿಡ ಪ್ರದೇಶ, ಅಲ್ಲಿ ವಾಣಿಜ್ಯ ಸಂಕೀರ್ಣಗಳಿವೆ.

2. ದಿಃ 09.07.2019 ರಂದು ನನ್ನ ತಮ್ಮ ಬಂದು ಹಲ್ಲೆ ನಡೆದ ವಿಚಾರ ತಿಳಿಸಿದ ನಂತರ ದೂರು ಸಲ್ಲಿಸಲು ತೊಂದರೆ ಇರಲಿಲ್ಲ. ನನ್ನ ತಮ್ಮನ ಮೈಮೇಲೆ ಗಾಯದ ಗುರುತುಗಳು ಇರಲಿಲ್ಲ. ನಾನು ವಿಜಯಪುರ ಮುಖ್ಯ ರಸ್ತೆಗೆ ಹೋಗುವ ಮೊದಲು ಯಾರಿಗೂ ದೂರವಾಣಿ ಕರೆ ಮಾಡಿಲ್ಲ. ವಿಜಯಪುರ ಮುಖ್ಯ ರಸ್ತೆಗೆ ನಾನು ಬೈಕಿನಲ್ಲಿ ಹೋದಾಗ ಮದ್ಯಾಹ್ನ 2.45 ಗಂಟೆ ಆಗಿತ್ತು. ನನ್ನೊಂದಿಗೆ ನನ್ನ ಸ್ನೇಹಿತ ವಿನಯ್ ಬಂದಿದ್ದ. ನಾವಿಬ್ಬರು ಒಂದೇ ಬೈಕಿನಲ್ಲಿ ಹೋದೆವು.

3. ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಮೆಟ್ರೋ ಬಟ್ಟೆ ಅಂಗಡಿಯ ಬಳಿ ಇದ್ದರು. ಉಳಿದ ಇಬ್ಬರು ಹಳೇ ಶೋಆಫ್ ಅಂಗಡಿಯ ಬಳಿ ಇದ್ದರು. ಮೆಟ್ರೋ ಬಟ್ಟೆ ಅಂಗಡಿಯ ಬಳಿ ಸಿಸಿ ಕ್ಯಾಮೆರಾ ಇದೆ. ಉಳಿದ ವಾಣಿಜ್ಯ

ಸಂಕೀರ್ಣಗಳಲ್ಲಿ ಆ ಸ್ಥಳದಲ್ಲಿ ಸಿಸಿ ಕ್ಯಾಮೆರಾಗಳು ಇಲ್ಲ. ಘಟನೆ ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಈಗ ಮೊಬೈಲ್ ಮೂಲಕ ತೋರಿಸಿದ ವಿಡಿಯೋ ಕ್ಲಿಪ್ಪನ್ನು ನೋಡುತ್ತಿದ್ದು ಸದರಿ ವಿಡಿಯೋ ಕ್ಲಿಪ್ ನಾನು ಹೇಳಿದ ಘಟನೆಗೆ ಸಂಬಂಧಿಸಿದ್ದಾಗಿದೆ.

4. ನಾನು ನೋಡಿದ ವಿಡಿಯೋ ಕ್ಲಿಪ್ ನಲ್ಲಿ ಇಬ್ಬರು ವ್ಯಕ್ತಿಗಳು ಬಂದು ಒಬ್ಬ ವ್ಯಕ್ತಿಗೆ ಹೊಡೆದು ಆ ಪೈಕಿ ವಿಡಿಯೋ ದಾಖಲಾಗಿದೆ ಎಂದರೆ ಸರಿ. ಈಗ ತೋರಿಸಿದ ವಿಡಿಯೋ ಕ್ಲಿಪ್ ನಲ್ಲಿ ನಾನು, ಚಾಸಾ.2, 6 ಮತ್ತು 7 ಇರುವುದು ಕಂಡು ಬರುವುದಿಲ್ಲ ಎಂದರೆ ನಿಜ. ಗಲಾಟೆ ಐದು ನಿಮಿಷದಲ್ಲಿ ಮುಗಿಯಿತು. ಸಾರ್ವಜನಿಕರ್ಯಾರು ಗಲಾಟೆ ಬಿಡಿಸಲು ಬರಲಿಲ್ಲ. ಅಂಗಡಿಯವರೆಲ್ಲ ಹೊರಗಡೆ ನಿಂತು ಗಲಾಟೆ ನೋಡುತ್ತಿದ್ದರು.

5. ಗಲಾಟೆಯಲ್ಲಿ ನನಗೆ ಎರಡು ಹೊಡೆತ ಬಿದ್ದವು. ನಿಪಿ.5 ಭಾವಚಿತ್ರದಲ್ಲಿ ಕಾಣುವ ಅಂಗಡಿಯ ಮುಂದೆ ಗಲಾಟೆ ನಡೆದಿರುವುದಿಲ್ಲ. ನಾನು ಪೆಟ್ಟು ಆದಾಗ ಕೆಳಗೆ ಬಿದ್ದಿದ್ದಾಗಲಿ ಪ್ರಜ್ಞೆ ಕಳೆದುಕೊಂಡಿದ್ದಾಗಲಿ ಆಗಿಲ್ಲ. ವಿಜಯಪುರ ಮುಖ್ಯ ರಸೆಯಿಂದ ಕಣ್ಣಳತೆ ದೂರದಲ್ಲಿ ಆಶ್ರಯ ನರ್ಸಿಂಗ್ ಹೋಮ್ ಇದೆ, ಇನ್ನೊಂದು ಬದಿಗೆ ಚೇತನ ನರ್ಸಿಂಗ್ ಹೋಮ್ ಇದೆ. ಅಲ್ಲಿಂದ ಸರ್ಕಾರಿ ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ಸುಮಾರು 7-8 ಕ್ಲಿನಿಕ್ ಗಳು ಇವೆ. ನಾನು ಅಲ್ಲಿ ಎಲ್ಲಿಯೂ ಚಿಕಿತ್ಸೆ ಪಡೆದಿಲ್ಲ. ನನ್ನ ಸ್ನೇಹಿತರ ಸಲಹೆಯ ಮೇರೆಗೆ ನಾನು ಸರ್ಕಾರಿ ಆಸ್ಪತ್ರೆಗೆ ದಾಖಲಾದೆ.

6. ನನಗೆ ಹಲ್ಲೆ ಮಾಡಲು ಉಪಯೋಗಿಸಿದ ರಾಡು ಹೇಗಿತ್ತು ಎಂದು ನೋಡುವ ಅವಕಾಶ ಇರಲಿಲ್ಲ. ಆನಂತರ ಕೂಡ ಪೋಲೀಸರು ನನಗೆ

ಕರೆದು ಹಲ್ಲೆ ಮಾಡಲು ಉಪಯೋಗಿಸಿದ ರಾಡನ್ನು ತೋರಿಸಿರುವುದಿಲ್ಲ.

7. ಅಂದು ನಾನು ಹಸಿರು ಬಣ್ಣದ ಟೀ ಶರ್ಟು ಮತ್ತು ಅದರ ಮೇಲೆ ನೀಲಿ ಬಣ್ಣದ ಜಾಕೆಟ್ ಧರಿಸಿದ್ದೆ. ಜಾಕೆಟಿಗೆ ರಕರ್ ತಾಗಿತ್ತು. ಸ್ಥಳದಲ್ಲಿ ರಕ್ತ ಬಿದ್ದಿತ್ತೆ ಎಂದು ನೋಡಿಲ್ಲ. ಜಾಕೆಟು ಪೋಲೀಸರಿಗೆ ಕೊಟ್ಟಿಲ್ಲ. ನನಗೆ ಕುತ್ತಿಗೆಯ ಮೇಲೆ ಕುಯ್ದು ಗಾಯ ಆಗಿತ್ತು. ವೈದ್ಯರು ಗಾಯಕ್ಕೆ ಹೊಲಿಗೆ ಹಾಕಿದ್ದರು. ಮು.ಮಾ.2 ರಾಡು ಹರಿತ ವಸ್ತು ಅಲ್ಲ.

8. ನಾನು ಹೇಳಿಕೆ ನೀಡುವ ಕಾಲಕ್ಕೆ ನನ್ನ ತಮ್ಮ ಮತ್ತು ಸ್ನೇಹಿತರು ಜೊತೆಗಿದ್ದರು. ಸಚಿನ್ ಎನ್ನುವಾತ ನಮ್ಮ ಮನೆಯ ಪಕ್ಕದಲ್ಲಿ ಸರ್ವೀಸ್ ಸ್ಟೇಷನ್ ಇಟ್ಟುಕೊಂಡಿದ್ದಾರೆ. ಚಾಸಾ.3, 4 ಹಾಗೂ 7 ನನ್ನೊಂದಿಗೆ ಆಸ್ಪತ್ರೆಗೆ ಬಂದಿರುವ ಬಗ್ಗೆ ದಾಖಲೆ ಇದೆ. ಪೋಲೀಸರು ಆಸ್ಪತ್ರೆಗೆ ಬಂದಾಗ ಮದ್ಯಾಹ್ನ 3.00 ಗಂಟೆ ಆಗಿರಬಹುದು. ಅರ್ದ ಗಂಟೆ ಕಾಲ ಪೋಲೀಸರು ಆಸ್ಪತ್ಯಯಲ್ಲಿದ್ದರು.

9. ದೂರನ್ನು ಪೋಲೀಸರೇ ಬರೆದು ಕೊಂಡರು. ದುಾರು ಬರೆದ ನಂತರ ನನಗೆ ಓದಿ ಹೇಳಿ ಸಹಿ ಪಡೆದುಕೊಂಡರು. ನಾನು ಹೇಳಿದಂತೆ ದೂರು ಬರೆಯ ಲಾಗಿದೆ ಎಂದು ನಿಪಿ.3 ದೂರಿನಲ್ಲಿ ನಮೂದಿಸಿಲ್ಲ. ನಾನು ದೂರನ್ನು ತಿದ್ದಿ ಬರೆಸಿರುವುದಿಲ್ಲ. ನಿಪಿ.3 ದೂರಿನಲ್ಲಿ ತಿದ್ದುಪಡಿ ಯಾವಾಗ ಮಾಡಲಾಗಿದೆ ಎಂದು ಗೊತ್ತಿಲ್ಲ. ದೂರು ಹೊರತುಪಡಿಸಿ ನಾನು ಪೋಲೀಸರಿಗೆ ಬೇರೆ ಹೇಳಿಕೆ ನೀಡಿರುವುದಿಲ್ಲ.

10. ನನ್ನ ದೂರು ಸ್ವೀಕರಿಸಿದಾಗಲೆ ಪೋಲೀಸರು ನನ್ನ ಅಂಗಿ ವಶಪಡಿಸಿಕೊಂಡರು. ನಿಪಿ.2 ಪೋಟೋವನ್ನು ಆಗಲೇ

ಸಂಗ್ರಹಿಸಿದ್ದರು. ನಿಪಿ.1 ದಾಖಲೆಗೆ ಅದೇ ಸಮಯದಲ್ಲಿ ನಾನು ಸಹಿ ಮಾಡಿದ್ದೇನೆ. ಆಸ್ಪತ್ರೆಯಲ್ಲಿ ನಾನು ಸಹಿ ಮಾಡಿದ್ದನ್ನು ಹೊರತುಪಡಿಸಿದರೆ ಬೇರೆ ಎಲ್ಲಿಯೂ ಸಹಿ ಮಾಡಿಲ್ಲ.

11. ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ನಮೂದಿಸಿಲ್ಲ ಎಂದರೆ ನಿಜ. ಆಸ್ಪತ್ರೆಗೆ ಬಂದ ಪೋಲೀಸರ ಪರಿಚಯ ನನಗಿಲ್ಲ. ನನ್ನ ಕೈಗೆ ಹೊರನೋಟಕ್ಕೆ ಕಾಣುವ ಗಾಯ ಆಗಿರಲಿಲ್ಲ. ನನಗೆ ಮತ್ತು ನನ್ನ ತಮ್ಮನಿಗೆ ಹಾಗೂ ಆರೋಪಿರಿಗೆ ಹಳೆಯ ದ್ವೇಷ ಇರಲಿಲ್ಲ. ನಾನಾಗಿಯೇ ಆ ಜಾಗಕ್ಕೆ ಹೋದ ಕಾರಣ ನನಗೆ ಮತ್ತು ಅಲ್ಲಿದ್ದವರಿಗೆ ಗಲಾಟೆ ಆಯಿತು.

12. ನನಗೆ ತೋರಿಸಿದ ವಿಡಿಯೋ ಕ್ಲಿಪ್ ನಲ್ಲಿ ಕಂಡುಬರುವ ವ್ಯಕ್ತಿಗಳು ಆರೋಪಿತರಲ್ಲ ಎಂದರೆ ಸರಿಯಲ್ಲ. ನಾನು ಪ್ಲಂಬಿಂಗ್ ಕೆಲಸ ಮಾಡುತ್ತೇನೆ. ಪ್ಲಂಬಿಂಟ್ ಕೆಲಸ ಮಾಡುವಾಗ ಆಕಸ್ಮಿಕವಾಗಿ ಗಾಯಗಳಾಗುತ್ತವೆ ಎಂದರೆ ಸರಿಯಲ್ಲ. ಪ್ಲಂಬಿಂಟ್ ಕೆಲಸ ದಲ್ಲಿ ಆದ ಗಾಯಗಳನ್ನು ದುರುಪಯೋಗಪಡಿಸಿಕೊಂಡು ಬೇರೆಯವರ ಮಾತುಕೇಳಿ ಆರೋಪಿತರು ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನ ತಮ್ಮ ಬಂದು ನನಗೆ ವಿಚಾರ ತಿಳಿಸಿದ್ದಾಗಲಿ, ನಾನು ಹೋದಾಗ ಆರೋಪಿತರು ಹಲ್ಲೆ ನಡೆಸಿದ್ದಾರೆಂದು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದುನಿಜವಲ್ಲ ಎಂದರೆ ಸರಿಯಲ್ಲ. ಸಮಯದ ದುರುಪಯೋಗ ಪಡೆದು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಆಗಿದೆ ಎನ್ನುವ ಗಾಯಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ

ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್